ಸಿ.ಸಿ. ನಂಬರಃ 637/2022
ಪಿ. ಡಬ್ಲ್ಯೂಃ 1

ದಿಃ 21-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ

ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ದೂರನ್ನು ನಿಪಿ-2 ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ದಿಃ29-05-2021 ರಂದು ಪೊಲೀಸ್ ಠಾಣೆಯ ಆವರಣದಲ್ಲಿ ಟಾಟಾ ಏಸ್ ವಾಹನದ ಪರಿಶೀಲನೆ ಮಾಡಿರುತ್ತಾರೆ. ಒಟ್ಟು 29 ಚೀಲಗಳಲ್ಲಿ ಅಕ್ಕಿ ಇದ್ದವು. ಸ್ವತ್ತು ಜಪ್ತಿಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಜರುಗಿಸಲಾಯಿತು. ಪಂಚನಾಮೆ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸ್ವತ್ತು ಜಪ್ತಿಪಂಚನಾಮೆಯನ್ನು ನಿಪಿ-3, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ವಾಹನವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪಂಚನಾಮೆಯಾದ ನಂತರ ಅಕ್ಕಿಯನ್ನು ತೂಕ ಮಾಡಲಾಗಿ ಅದರಲ್ಲಿ 5 ಕೆ.ಜಿ ಅಕ್ಕಿಯನ್ನು ಪ್ರತ್ಯೇಕವಾಗಿ ತೆಗೆದಿದ್ದು, ಸ್ಯಾಂಪಲ್ ಗಾಗಿ ಆಹಾರ ಇಲಾಖೆಗೆ ಕಳುಹಿಸಿಕೊಡಲಾಯಿತು. ನಂತರ ಪೊಟೋವನ್ನು ತೆಗೆಯಲಾಯಿತು. ಸಾಕ್ಷಿಯು 3

ಪೊಟೋಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು.

2. ನಂತರ ಅದೇ ದಿನ ಘಟನಾ ಸ್ಥಳಕ್ಕೆ ಪಂಚನಾಮೆಗೆಂದು ಪೊಲೀಸರ ಜೊತೆಗೆ ಹೋಗಿರುತ್ತೇನೆ. ನಾನು ತೋರಿಸಿದ ಸ್ಥಳದ ಮೇರೆಗೆ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2.45 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯ ಮೇಲಿರುವ ಸಹಿಯನ್ನು ಗುರುತಿಸಿದ್ದು, ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-7 ಸಾಕ್ಷಿ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ನಂತರ ಪೊಟೋವನ್ನು ತೆಗೆಯಲಾಯಿತು. ಸಾಕ್ಷಿಯು ಪೊಟೋವನ್ನು ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

3. ದಿಃ13-09-2021 ರಂದು ಪೊಲೀಸರು ಆರೋಪಿತರನ್ನು ಗುರುತಿಸಲು ಠಾಣೆಗೆ ಕರೆದಿರುತ್ತಾರೆ. ಅಲ್ಲಿ 3 ನೇ ಆರೋಪಿಯಾದ ವಾಹನದ ಚಾಲಕನನ್ನು ಗುರುತಿಸಿರುತ್ತೇನೆ. ದಿಃ20-09-2021 ರಂದು ಮತ್ತೆ ಠಾಣೆಗೆ ಕರೆದಿದ್ದು, ಆಗ 1 ನೇ ಆರೋಪಿಯನ್ನು ಗುರುತಿಸಿರುತ್ತೇನೆ. ದಿಃ11-11-2021 ರಂದು ಮತ್ತೆ ಠಾಣೆಗೆ ಕರೆದಿದ್ದು, ಆಗ ನಾನು 2 ನೇ ಆರೋಪಿಯನ್ನು ಗುರುತಿಸಿರುತ್ತೇನೆ. ಅದೇ ದಿನ ನಾನು ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿತರನ್ನು ಗುರುತಿಸಿದ್ದರ ಬಗ್ಗೆ ಮರು ಹೇಳಿಕೆಯನ್ನು

ಕೊಟ್ಟಿರುತ್ತೇನೆ. ಅಂದು ಗುರುತಿಸಿದ ಆರೋಪಿತರು ನ್ಯಾಯಾಲಯದ ಮುಂದೆ ಇದ್ದು, ಅವರನ್ನು ನಾನು ಗುರುತಿಸುತ್ತೇನೆ. ಸಾಕ್ಷಿಯು ಮುದ್ದೆ ಮಾಲಿನ ಮೇಲಿರುವ ಸಹಿಯನ್ನು ಗುರುತಿಸಿದ್ದು, ಮುದ್ದೆ ಮಾಲುನ್ನು ಮುಮಾ-1 ಮತ್ತು ಸಹಿಯನ್ನು ಮುಮಾ-1 ಎ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಸರ್ಕಾರಿ ಅಭಿಯೋಜಕರು ತಕರಾರನ್ನು ಎತ್ತಿದ್ದು, ಅದನ್ನು ಪರಿಗಣಿಸಿ, ಪಾಟೀ ಸವಾಲನ್ನು ರೂ.200/- ಖರ್ಚಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.